ಕಥೆ

# ...ಹರಿವ ತೊರೆಯ ಹಾಡು...



■ ಸಂತೋಷ್ ಅನಂತಪುರ

'ಎಲ್ಲಿ ಜಾರಿತೋ ಮನವು ಎಲ್ಲೆ ಮೀರಿತೋ, ಎಲ್ಲಿ ಅಲೆಯುತಿಹುದೋ ಏನೋ ಇಲ್ಲದಾಯಿತು...', ಜಾರಿ ಹೋಗುತ್ತಿದ್ದ ಮನಸ್ಸನ್ನು ಇನ್ನಷ್ಟು ಜಾರಿಸುತ್ತಾ ಹಾಡು ಮುಂದಕ್ಕೆ ಓಡುತ್ತಿತ್ತು. ಹೊಸದಾಗಿ ಕೊಂಡುಕೊಂಡ ಓನ್ಕಿಯೊ ಮ್ಯೂಸಿಕ್ ಸಿಸ್ಟಮ್‌ನಲ್ಲಿ ಹಾಡಿನ ಪ್ರತಿಯೊಂದು ಸೂಕ್ಷ್ಮಾತಿಸೂಕ್ಷ್ಮಗಳೂ ಕರ್ಣಕ್ಕೆ ಇಂಪಾಗಿ ಬಡಿಯುತ್ತಿದ್ದುವು. ಹೊರಗೆ ಶ್ರಾವಣದ ಜಿಟಿ ಜಿಟಿ ಮಳೆಯ ಹನಿ ಅದಾಗಲೇ ಮಣ್ಣನ್ನು ಮುತ್ತಿಕ್ಕಲು ತೊಡಗಿದ್ದುವು. ತನ್ನನ್ನು ಜೀವಂತವಾಗಿರಿಸಿದ್ದ ಆ ಎಲ್ಲಾ ಭಾವಪೂರ್ಣ ಹಾಡುಗಳಿಗೆ ಮನದಲ್ಲೇ ನಮಿಸುತ್ತಾ... ಈ ಹಾಡಿಗೂ, ಭಾವಕ್ಕೂ ಅದೇನು ಮಿಳಿತವಪ್ಪಾ....ಸಂಗೀತ ಎನ್ನುವುದು ನಮ್ಮ ಎಲ್ಲಾ ಭಾವನೆಗಳ ಏಕೈಕ ಸಾಥಿ! ಎನ್ನುತ್ತಾ ಪಂಚಮ ತನ್ನ ದೇಹವನ್ನು ಬಿನ್ ಬಾಗ್‌ನೊಳಕ್ಕೆ ಇಳಿಬಿಟ್ಟು ಸಪ್ತಸ್ವರಗಳೊಳಗೆ ಲೀನನಾದ.

'ದಣಿದ ಜೀವಕೆ ಮತ್ತೆ ಕನಸನುಣಿಸಿ...ಉಣಿಸಿರುವ ನೀರೆ ನೀನು ಯಾರೇ...' ಎಂಬ ಮುಂದಿನ ಹಾಡು ದಣಿದ ಜೀವವನ್ನು ತಟ್ಟಿದಾಗಲೇ ಮಂಪರಾವರಿಸಿದ ಪಂಚಮನ ಕಣ್ಣುಗಳು ಭಾವ ತೀರದಲ್ಲಿ ಒದ್ದೆಯಾಗಿದ್ದುವು. ಅವನೊಳಗೆ ಓಡಿ ಹೋಗಲಾರದ ದಣಿದ ಮನಸ್ಸು ಅಲ್ಲೇ ಮುದುರಿ ಕುಳಿತಿತ್ತು.

ಹದಿನೈದು ವರ್ಷದ ಕೆಳಗೆ ಸರ್ಜಾಪುರದ ಹೊರವಲಯದಲ್ಲಿ ತನ್ನ ರುಚಿಗೆ ತಕ್ಕ ಹಾಗೆ ವಿನ್ಯಾಸಗೊಳಿಸಿ ಮನೆಯೊಂದನ್ನು ಕಟ್ಟಿಸಿದ್ದ. ಇವನಂತೆ ಇತರರೂ ಆ ಬಡಾವಣೆಯಲ್ಲಿ ತಮ್ಮ ತಮ್ಮ ರುಚಿಗೆ ತಕ್ಕಂತೆ ಬೆಚ್ಚಗಿನ ಗೂಡನ್ನು ನಿರ್ಮಿಸಿದ್ದರು. ಹೇಳಿ ಕೇಳಿ ಮಾನವ ಸಂಘ ಜೀವಿ! ಹಾಗಾಗಿ ಸಂಜೆಯ ಸವಾರಿಯಲ್ಲೋ, ಮುಂಜಾನೆಯ ನಡಿಗೆಯಲ್ಲೋ ಅಥವಾ ಹಬ್ಬ–ಹರಿದಿನ, ವಾರಾಂತ್ಯವೆಂಬ ಮನುಷ್ಯ ನಿರ್ಮಿತ ಚೌಕಟ್ಟುಗಳ ಒಳ ಹೊರಗೋ... ಆ ಪರಿಸರದಲ್ಲಿನ ಹಲವು ಬಂಧಗಳು ಹಾಗೆ ಬಂದು ಹೀಗೊಮ್ಮೆ ಇಣುಕು ಹಾಕಿ ಕಣ್ಮರೆಯಾಗುತ್ತಿದ್ದುವು. ಎಲ್ಲರಿಗೂ ತಿಳಿದಂತೆ ಪಂಚಮ ಒಬ್ಬ ಲಹರಿಯ ಮನುಷ್ಯ. ಬದುಕನ್ನು ಇಂಚು ಇಂಚಾಗಿ ಅನುಭವಿಸುವ ಮತ್ತು ಎಲ್ಲರೂ ಅನುಭವಿಸಬೇಕೆಂದು ಪ್ರತಿಪಾದಿಸುವ ಸಾಲಿನವನು. ಹಾಗಾಗಿ ಬದುಕನ್ನು ಪೂರ್ಣ ಪ್ರಮಾಣದಲ್ಲಿ ಉಂಡು ತೇಗುವುದು ಅವನಿಗೆ ದೇವರು ಕೊಟ್ಟ ವರವೇ ಸರಿ! ಬದುಕಲ್ಲಿ ಜೀವಂತಿಕೆಯ ಕಾರಂಜಿ ಚಿಮ್ಮಿಸುವ ಪಂಚಮನ ಬಳಿ ಯಾರೇ ಸುಳಿದರೂ ಪಂಚಮದಲ್ಲಿಯೇ ಸ್ವರ ಸೇರಿಸುತ್ತಾರೆಯೇ ಹೊರತು ಮಧ್ಯಮದಲ್ಲಿ ಹಾಡುವುದಿಲ್ಲ. ತನ್ನ ಬಳಿ ಮುತ್ತುವ ಯಾವುದೇ ಜೀವಾತ್ಮವನ್ನು ತನ್ನೊಳಗೆ ಸೆಳೆದು ಬಿಟ್ಟುಕೊಳ್ಳುವುದು ಅವನಿಗೊಲಿದ ಕಲೆ. ಇಂತಿಪ್ಪ ಪಂಚಮ ಏನೇ ಮಾತನಾಡಿದರೂ ಕೊನೆಗೆ ಬಂದು ನಿಲ್ಲುವುದು 'ಲೈಫ್ ಈಸ್ ಬ್ಯೂಟಿಫುಲ್' ಎಂಬ ಪದಪುಂಜಗಳ ಸಾಲಿಗೆ. ಅಂದರೆ ಆತ ಅಷ್ಟು ಉತ್ಕಟವಾಗಿ ಬದುಕನ್ನು ಪ್ರೇಮಿಸುವ, ಕಾಮಿಸುವ ಒಂದು ಜೀವಾತ್ಮ !

ಐಟಿ ಕ್ಷೇತ್ರದ ವ್ಯವಸಾಯದಿಂದ ಉಂಟಾಗುವ ವಾರಾಂತ್ಯದ ಒತ್ತಡ, ಜಂಜಾಟವನ್ನು ಬಡಿದು ಓಡಿಸಲು, ಇತರ ಎಲ್ಲಾ ಟೆಕ್ಕಿಗಳಂತೆ ಅವನೂ ಮೊರೆ ಹೋದದ್ದು ಥ್ಯಾಂಕ್ ಗಾಡ್ ಇಟ್ಸ್ ಫ್ರೈಡೇಗೆ (TGIF)! ಜರ್ಜರಿತಗೊಂಡ ದೇಹ ಮನಸ್ಸನ್ನು ತಣಿಸಲು ಪಂಚಮ ಅದಾಗಲೇ ತನ್ನ ನೆಚ್ಚಿನ TGIF ನ ಟೇಬಲ್‌ನಲ್ಲಿ ದೇಹವನ್ನು ಇಳಿಬಿಟ್ಟಾಗಿತ್ತು. ಅಲ್ಲಿನ ಮ್ಯಾನೇಜರ್ ಇವನಿಗಾಗಿಯೇ 'ವಿಶೇಷ ಬಾರ್ ಬಾಯ್' ಎಂದೇ ಇವನಿಂದ ಪ್ರಶಂಸಿಸಲ್ಪಟ್ಟ ಶಿಬು ಲಾಲ್ ಅನ್ನು ನೇಮಿಸಿದ್ದ. ಶಿಬು ಬಂದವನೇ ಮುಗುಳ್ನಕ್ಕು ಒಂದಿಷ್ಟು ಹುರಿದ ಗೋಡಂಬಿಯನ್ನು ಅವನ ಮುಂದಿಟ್ಟು ಮಿ.ಡಿಜೆಗೆ ಕಣ್ಣಲ್ಲೇ ಸನ್ನೆ ಮಾಡಿದ. ತಕ್ಷಣವೇ ಅದನ್ನು ಗಮನಿಸಿದ ಮಿ.ಡಿಜೆ, ಅದಾಗಲೇ ಅರಚುತ್ತಿದ್ದ ಅಂಗ್ರೇಜಿ ಹಾಡನ್ನು ಬದಿಗೊತ್ತಿ ಕಿಶೋರ್–ಲತಾ ಹಾಡಿದ 'ತುಮ್ ಆಗಯೇ ಹೊ..ನೂರ್ ಆಗಯಾ ಹೇ....' ಹಾಡನ್ನು ಹಾಕಿ ಪಂಚಮನ ಕಣ್ಣುಗಳು ಅರಳಿದ್ದನ್ನು ಕಂಡು ಖುಷಿಗೊಂಡ. ಶಿಬುಲಾಲ್ ತನ್ನ ಮೆಚ್ಚಿನ 'ಶಿವಾಸ್' ಅನ್ನು ಜೊತೆಗೆ ರಷ್ಯನ್ ಸಲಾಡ್ ಅನ್ನು ತಂದಿರಿಸಿದ. ಬಾನಿಗೆ ಅದಾಗಲೇ ಹೊದೆಸಿದ ಬೆಳದಿಂಗಳನ್ನು ಆಸ್ವಾದಿಸುತ್ತಿದ್ದ ಪಂಚಮನನ್ನು ಸರ್.... ಎಂದು ಕೂಗಿದ.

ಆತ ಕರೆದ ಕರೆಗೆ... ಥಟ್ಟನೆ ತಿರುಗಿದ ಪಂಚಮನನ್ನು ಉದ್ದೇಶಿಸಿ 'ಲೈಫ್ ಈಸ್ ಬ್ಯೂಟಿಫುಲ್....' ಎನ್ನುತ್ತಾ ಒಂದು ಸಣ್ಣ ನಗೆ ಬೀರಿ ಅತ್ತ ಸರಿದ. ಬಂಗಾರ ಬಣ್ಣದ 'ಶಿವಾಸ್' ಅನ್ನು ಮೆತ್ತಗೆ ಹೂವಿನಂತೆ ಎತ್ತಿ ಒಂದೊಂದೇ ಗುಟುಕನ್ನು ಸೇವಿಸುತ್ತಾ ಬದುಕಿನ ಆ ಕ್ಷಣದ ಸುಖವನ್ನು ಪಂಚಮ ಮೆಲ್ಲುತ್ತಿದ್ದ. ತಕ್ಷಣವೇ ರಿಂಗಣಿಸಿದ ಮೊಬೈಲ್ ಅನ್ನು ಎತ್ತಿ ನೋಡಿದರೆ ಅದೊಂದು ಮಿಸ್ಡ್ ಕಾಲ್. ಅದು ಯಾರೆಂದು ಟ್ರೇಸ್ ಮಾಡಲು ಮನಸ್ಸಾಗದೆ ಹೇ...ಥೂ..ಎಂದವನೇ ಕೈಗಡಿಯಾರದತ್ತ ಸಮಯವನ್ನು ನೋಡಿದ. ಇವನ ಇಷ್ಟಾನಿಷ್ಟಗಳನ್ನು ದೂರದಿಂದಲೇ ಗಮನಿಸುತ್ತಿದ್ದ ಶಿಬುಲಾಲ್ ಅಲ್ಲೇ ಪಕ್ಕದಲ್ಲಿ ಹಾಡನ್ನು ಪ್ಲೇ ಮಾಡುತಿದ್ದ ಮಿ. ಡಿಜೆಗೆ ವಿಷಯ ತಿಳಿಸಿದ್ದೇ, ಆತ ಟ್ರ್ಯಾಕ್ ಬದಲಿಸಿ ಕಿಶೋರ್–ಲತಾರ ಇನ್ನೊಂದು ಹಾಡಿನ ಮುಂದುವರಿದ ಭಾಗವನ್ನು ಮುಂದುವರಿಸಿದ 'ತುಮ್ ಜೊ ಕೆಹೆ ದೊ ಕಿ ಆಜ್ ಕಿ ರಾತ್ ಚಾಂದ್ ಡು...ಬೆಗಾ ನಹೀ...ರಾತ್ ಕೊ ರೋಕಲೊ...' ಹಾಡು ಕೇಳಿದ ಪಂಚಮ ಕಣ್ಣಲ್ಲೇ ನಕ್ಕ. ಹೊರಗೆ ಅಂಬರದಿ ತುಂಬಾ ಬೆಳಕು ಚೆಲ್ಲಿದ ರಜನೀಶ, ನಾನು ಅಸ್ತಮಿಸಲು ಇನ್ನೂ ಸಮಯವಿದೆ ಪಂಚಮ 'ಲೈಫ್ ಈಸ್ ಬ್ಯೂಟಿಫುಲ್ ಕಣೋ' ಎಂದು ಚಂದಿರನೇ ನುಡಿದಂತಾಗಿ ಒಮ್ಮೆಲೆ ಪುಳಕಗೊಂಡು ತಕ್ಷಣವೇ ಕೈ ಸನ್ನೆಯ ಮೂಲಕ ಶಿವಾಸ್ ನ ಪುನರಾವರ್ತನೆಗೆ ಸೂಚಿಸಿದ.

ರಜನೀಶನ ಉದ್ದೀಪನವನ್ನು ಸೇವಿಸುತ್ತಾ ಇದ್ದ ಪಂಚಮನ ಬೆನ್ನಿಗೆ ಅನಿರೀಕ್ಷಿತವಾಗಿ ಗುದ್ದು ಬಿದ್ದಾಗಲೇ ಆತ ಈ ಲೋಕಕ್ಕೆ ಮರಳಿದ್ದು. ನೋಡಿದರೆ ಮುಂದೆ ಜೀವದ ಗೆಳೆಯ ತೇಜಸ್ವಿ 'ಇಷ್ಟು ದೂರ ಬಂದಿದ್ದೀಯಾ ಅಂದ್ರೆ ಪ್ರಶ್ನೆಯೆಂಬ ಹುಳುವನ್ನು ಎತ್ತುಕೊಂಡೇ ಬಂದಿದ್ದೀ ಅನ್ನು' ಎಂದು ತೇಜಸ್ವಿಯ ಬೆನ್ನಿಗೆ ಗುದ್ದಿ ಹೇಳಿದ. 'ಹೌದೋ ಮಾರಾಯ, ಈ ಪ್ರಶ್ನೆಗಳೆಲ್ಲಾ ನನ್ನಿಂದ ನನಗಾಗಿ ಮಾತ್ರ ಕಣೋ ಎನ್ನುತ್ತಿದ್ದಂತೆಯೇ ಅದಕ್ಕೆಲ್ಲಾ ಉತ್ತರವೂ ನನ್ನಲ್ಲಿ ಮಾತ್ರ ಗೆಳೆಯ.... ಹೇಳು ಅದೇನು ನಿನ್ನ ಪ್ರಶ್ನೆ' ಎಂದು ಡಯಲಾಗ್ ಹೊಡೆದು ಒಮ್ಮೆ ನಕ್ಕು ಚೀರಿ ಬಿಡು ಎಂದವರೇ ಗ್ಲಾಸ್ ಗ್ಲಾಸ್‌ಗಳ ಸರಸವನ್ನು ಟನ್...ಟನಾ...ಟನ್ ಎಂದು ಶಬ್ದ ಮಾಡುವುದರ ಜೊತೆಗೆ ತೇಜಸ್ವಿ ಪ್ರಶ್ನೆಯ ಬಾಣವನ್ನೆಸೆದ. 'ಅಲ್ಲಾ ಕಣೋ ಪಂಚಮ, ಈ ಪ್ರೀತಿ, ಪ್ರೇಮ, ಪ್ರಣಯ ಎಲ್ಲಾ ಎಷ್ಟು ದಿನ ಕಣೋ...?' ಮುಗುಳ್ನಕ್ಕು ಪಂಚಮ ಹೇಳಿದ; 'ಬದುಕು ನೀತಿರುವುದೇ ಆ ಮೂರರ ಮೇಲೆ ಕಣೋ ದಡ್ಡಾ...' ಈ ಮೂರರಲ್ಲಿ ನನಗೆ ನೀನು ಯಾವುದನ್ನು ಆರಿಸುತ್ತೀ ಎಂದು ಕೇಳಿದರೆ ನಾನು 'ಪ್ರಣಯವನ್ನೇ ಕಣ್ಲಾ....!' ಈ ಪ್ರಣಯವಿದೆಯಲ್ಲಾ..., ಇದರಲ್ಲಿ ಪ್ರೀತಿ, ಪ್ರೇಮಗಳು ಅರಳುತ್ತವೆ. ಇದೊಂದು ನಿರಂತರ ಪ್ರಕ್ರಿಯೆ. ಅದೊಂದು ಹರಿಯುವ ನೀರು. ಪುಳಕಗಳು, ಸೆಳೆತಗಳು, ರಭಸಗಳು ಹೇರಳವಾಗಿವೆ. ಆದರೆ ಪ್ರೀತಿ– ಪ್ರೇಮವೆಂಬ ಸರೋವರದಲ್ಲಿ ಈಜಾಡಿ, ಮುಳುಗೆದ್ದು ಅಲ್ಲೇ ಹಲವು